14

## ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1237

2] ಮಾನ್ಯ ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ)

3] ಉತ್ತರಿಸುವ ದಿನಾಂಕ : 19/12/2024

4] ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಇರುವ ಸೈಬರ್ ಠಾಣೆಗಳ ಸಂಖ್ಯೆ ಎಷ್ಟು; ಅವುಗಳಿಗೆ ಮಂಜೂರಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ 43 ಸಿ.ಇ.ಎನ್. ಪೊಲೀಸ್ ಠಾಣೆಗಳು ಮತ್ತು 02 ಸೈಬರ್ ಅಪರಾಧ ಪೊಲೀಸ್ ಠಾಣೆಗಳು (ಸಿ.ಸಿ.ಪಿ.ಎಸ್) ಕಾರ್ಯನಿರ್ವಹಿಸುತ್ತಿವೆ.<br><br>ಸದರಿ ಪೊಲೀಸ್ ಠಾಣೆಗಳಿಗೆ ಮಂಜೂರಾಗಿರುವ ಅಧಿಕಾರಿ/ಸಿಬ್ಬಂದಿಗಳ ಮಂಜೂರಾತಿ ಬಲ, ಹಾಲಿ ಬಲ ಹಾಗೂ ರಿಕ್ತಸ್ಥಾನಗಳ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ಕಳೆದ ಐದು ವರ್ಷಗಳಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳು ಎಷ್ಟು; ಅವುಗಳಿಂದ ಸಾರ್ವಜನಿಕರು ಕಳೆದುಕೊಂಡ ಹಣವೆಷ್ಟು, ಅವುಗಳಲ್ಲಿ ಎಷ್ಟು ಅಪರಾಧಿಗಳನ್ನು ಪತ್ತೆ ಹಚ್ಚಲಾಗಿದೆ, ಪತ್ತೆ ಹಚ್ಚಲಾಗದ ಪ್ರಕರಣಗಳು ಎಷ್ಟು;</td><td>ಕಳೆದ ಐದು ವರ್ಷಗಳಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ.<br><br><u>ಐಟಿ ಕಾಯ್ದೆ/ಸೈಬರ್ ಅಪರಾಧಗಳು</u>
<table>
<tr><th>ವರ್ಷ</th><th>ವರದಿ</th><th>ತನಿಖೆ</th><th>ಪತ್ತೆ ಹಚ್ಚಬೇಕಾದ ಪ್ರಕರಣಗಳು</th><th>ಪತ್ತೆ ಹಚ್ಚಿದ ಅಪರಾಧಿಗಳು</th><th>ವಂಚನೆಯ ಮೊತ್ತ</th></tr>
<tr><td>2020</td><td>10872</td><td>34</td><td>6981</td><td>872</td><td>106,98,78,216</td></tr>
<tr><td>2021</td><td>8362</td><td>114</td><td>5334</td><td>942</td><td>444,01,94,655</td></tr>
<tr><td>2022</td><td>12879</td><td>452</td><td>8969</td><td>1009</td><td>524,67,75,065</td></tr>
<tr><td>2023</td><td>22194</td><td>6154</td><td>11751</td><td>931</td><td>862,71,18,961</td></tr>
<tr><td>2024</td><td>20875</td><td>16784</td><td>3106</td><td>490</td><td>2047,22,33,754</td></tr>
</table></td></tr>
<tr><td>ಇ)</td><td>ಸೈಬರ್ ಅಪರಾಧ ಪತ್ತೆ ಹಚ್ಚಲು ವಿಶೇಷ ತಾಂತ್ರಿಕ ಪರಿಣಿತರನ್ನು ನೇಮಕ ಮಾಡಲು ಅಥವಾ ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಸೈಬರ್ ಅಪರಾಧ ಪತ್ತೆ ಹಚ್ಚಲು ವಿಶೇಷ ತಾಂತ್ರಿಕ ಪರಿಣಿತರ ನೇಮಕಾತಿಯ ವಿವರ ಕೆಳಕಂಡಂತಿದೆ:<br><br>ರಾಜ್ಯದಲ್ಲಿರುವ ಸೈಬರ್ ಠಾಣೆಗಳ ಮೇಲುಸ್ತುವಾರಿಗಾಗಿ ಎಡಿಜಿಪಿ/ಡಿಜಿಪಿ, ಸೈಬರ್ ಮತ್ತು ನಾರ್ಕೋಟಿಕ್ಸ್ ಹುದ್ದೆಯನ್ನು ಸೃಜಿಸಲಾಗಿದೆ.<br><br>ಸೈಬರ್ ವಂಚನೆ ಪ್ರಕರಣಗಳನ್ನು ತ್ವರಿತಗತಿಯಲ್ಲಿ ತನಿಖೆ ಮಾಡಿ ಸಾರ್ವಜನಿಕರಿಗೆ ಅಕ್ರಮ ನಷ್ಟ ತಪ್ಪಿಸುವ ಸಲುವಾಗಿ ರಾಜ್ಯದಲ್ಲಿ 43 ಸಿ.ಇ.ಎನ್. ಪೊಲೀಸ್ ಠಾಣೆಗಳನ್ನು ಸೃಜಿಸಲಾಗಿದ್ದು, ಗುಣಮಟ್ಟದ ತನಿಖೆಯ ಸಲುವಾಗಿ ಡಿವೈಎಸ್‌ಪಿ/ಎಸಿಪಿ ದರ್ಜೆಯ ಅಧಿಕಾರಿಗಳನ್ನು ಎಸ್.ಹೆಚ್.ಓ.ಗಳನ್ನಾಗಿ ಮಾಡಲಾಗಿದೆ.</td></tr>
</table>

<table>
<tr>
<td></td>
<td></td>
<td>
ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 29 ಪಿಓಪಿ 2019, ದಿನಾಂಕ: 16.12.2019 ರನ್ವಯ ಬೆಂಗಳೂರು ನಗರ ಘಟಕದ 08 ಹೊಸ ಸಿ.ಇ.ಎನ್ ಪೊಲೀಸ್ ಠಾಣೆಗಳಲ್ಲಿ 08–Cyber Security Analyst ಮತ್ತು 08–Digital Forensic Analyst ಹುದ್ದೆಗಳನ್ನು ಸೈಬರ್ ಅಪರಾಧ ಪತ್ತೆಗೆ ತಾಂತ್ರಿಕ ಹುದ್ದೆಗಳನ್ನು ಸೃಜಿಸಲಾಗಿದೆ.<br><br>
ಪೊಲೀಸ್ ಸಿಬ್ಬಂದಿಗಳಿಗೆ ವಿವಿಧ ಪೊಲೀಸ್ ವಿಭಾಗಗಳಿಂದ ನೀಡಲಾಗಿರುವ ತರಬೇತಿ ವಿವರಗಳು ಈ ಕೆಳಕಂಡಂತಿದೆ:<br><br>
<table>
<tr><th>ಘಟಕ</th><th>ಆಫ್‌ಲೈನ್ ತರಬೇತಿ</th><th>ಆನ್‌ಲೈನ್ ತರಬೇತಿ</th></tr>
<tr><td>ಪೊಲೀಸ್ ತರಬೇತಿ ವಿಭಾಗ</td><td>14,550</td><td>76</td></tr>
<tr><td>ಸಿ.ಐ.ಡಿ ವಿಭಾಗ:<br>Center for Cyber Crime Investigation Training & Research (CCITR)</td><td>2,550</td><td>17,056</td></tr>
<tr><td>Cyber Crime Prevention against Women & Children (CCPWC)</td><td>845</td><td>0</td></tr>
<tr><td>ಪೊಲೀಸ್ ಗಣಕ ವಿಭಾಗ:<br>Crypto Currency Investigation Training</td><td>37</td><td>63</td></tr>
<tr><td>ಒಟ್ಟು</td><td>18,082</td><td>17,195</td></tr>
</table>
<br>
<u>ಸೈಬರ್ ಕಮಾಂಡೋಸ್:</u><br>
ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯವು ಸೈಬರ್ ಕಮಾಂಡೋಸ್ ವಿಶೇಷ ವಿಭಾಗವನ್ನು ಸ್ಥಾಪಿಸಿ, ಸೈಬರ್ ಭದ್ರತೆಗೆ ಬೆದರಿಕೆಗಳನ್ನು ಎದುರಿಸಲು ಮಾಹಿತಿ ತಂತ್ರಜ್ಞಾನ ನೆಟ್‌ವರ್ಕ್ ಅನ್ನು ರಕ್ಷಿಸಲು ಸೈಬರ್ ಅಪರಾಧ ತನಿಖೆ ಕೈಗೊಳ್ಳಲು ಮತ್ತು ಪೊಲೀಸ್ ಸೈಬರ್ ಭದ್ರತಾ ಅಗತ್ಯತೆಗಳನ್ನು ನೋಡಿಕೊಳ್ಳಲು ಸೂಕ್ತ ತರಬೇತಿ ಪಡೆದ ಸೈಬರ್ ಕಮಾಂಡೋಗಳ ವಿಶೇಷ ವಿಭಾಗವನ್ನು ಸ್ಥಾಪಿಸಲಾಗಿದೆ.<br><br>
ಸದರಿ ವಿಭಾಗಕ್ಕೆ ಕರ್ನಾಟಕ ರಾಜ್ಯದಿಂದ ತರಬೇತಿ ಪಡೆಯಲು 25 ಅಧಿಕಾರಿ/ಸಿಬ್ಬಂದಿಗಳನ್ನು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಬರುವ I4C ರವರಿಗೆ ನಾಮ ನಿರ್ದೇಶನ ಮಾಡಿ ಕಳುಹಿಸಿಕೊಡಲಾಗಿರುತ್ತದೆ.
</td>
</tr>
<tr>
<td>ಈ)</td>
<td>ಹ್ಯಾಕಿಂಗ್ ಕೃತ್ಯಗಳು ಸಹ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಹ್ಯಾಕರ್ ಕೃತ್ಯವನ್ನು ಭೇದಿಸಲು ಮತ್ತು ಹ್ಯಾಕಿಂಗ್ ಪ್ರಕರಣಗಳನ್ನು ಪತ್ತೆ ಹಚ್ಚಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td>
<td>ಹ್ಯಾಕಿಂಗ್ ಕೃತ್ಯಗಳು ಸಹ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇವುಗಳನ್ನು ಬೇಧಿಸಲು ಮತ್ತು ಪತ್ತೆ ಹಚ್ಚಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>
ಸಿ.ಐ.ಡಿ ಘಟಕದ ಸಿ.ಸಿ.ಡಿ ವಿಭಾಗದಲ್ಲಿ ಹ್ಯಾಕಿಂಗ್ ಹಾಗೂ ಇತರೆ ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು Drone Forensics, RAID Forensics, Wearable Device Forensics, Cloud Forensics. Crypto Currency Tracing</td>
</tr>
</table>

| | | |
|---|---|---|
| | | **and Investigation** ನಂತಹ ಸುಧಾರಿತ ತಂತ್ರಜ್ಞಾನವನ್ನು ಹಾಗೂ ಆಧುನಿಕ ವಿಧ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಅಧಿಕಾರಿ/ಸಿಬ್ಬಂದಿಗಳಿಗೆ ವಿಶೇಷ ತರಬೇತಿಗಳನ್ನು ಸಹ ಆಯೋಜಿಸಲಾಗುತ್ತಿದೆ.<br><br>ಅಲ್ಲದೇ, ಸಿ.ಐ.ಡಿ ಘಟಕದಲ್ಲಿ ತನಿಖೆ ಕೈಗೊಳ್ಳಲಾಗಿರುವ ಸೈಬರ್ ಅಪರಾಧ ಪ್ರಕರಣಗಳಲ್ಲಿ ವಿಷಯ ತಜ್ಞರ/ತಾಂತ್ರಿಕ ಪರಿಣಿತರ ಸೇವೆಯನ್ನು ಪ್ರಕರಣವಾರು ಪಡೆಯಲಾಗುತ್ತಿದೆ. |

**ಸಂಖ್ಯೆ: ಹೆಚ್‌ಡಿ 171 ಪಿಪಿಪಿ 2024**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು.